## ಗೂಗ್ಲ್ ಪ್ಲೇ ನ್ಯೂಸ್‌ಸ್ಟ್ಯಾಂಡ್




ಆ್ಯಂಡ್ರಾಯ್ಡ್‌ನ ಈ ಆ್ಯಪ್ ಪುಸ್ತಕ, ಬ್ಲಾಗ್ಸ್ ಹಾಗೂ ಮತ್ತಿತರ ಓದುವ ಹವ್ಯಾಸವುಳ್ಳವರಿಗೆ ಅನುಕೂಲ. ಓದುವುದು ಮಾತ್ರವಲ್ಲ, ಅವುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬಹುದು. ಇದು ನಿಮ್ಮ ನೆಚ್ಚಿನ ಮೂಲಗಳಿಂದ ಸುದ್ದಿಗಳ ಶೀರ್ಷಿಕೆಗಳನ್ನು ಕಳಿಸುತ್ತದೆ. ಇದರಲ್ಲಿ ನಾಲ್ಕು ಪ್ರಮುಖ ವಿಭಾಗಗಳಿವೆ– ರೀಡ್ ನೌ, ಮೈ ಲೈಬ್ರರಿ, ಬುಕ್‌ಮಾರ್ಕ್ಸ್ ಹಾಗೂ ಎಕ್ಸ್‌ಪ್ಲೋರ್. ದಿ ನ್ಯೂಯಾರ್ಕ್ ಟೈಮ್ಸ್‌ನಂತಹ ಪತ್ರಿಕೆಯ ಸುದ್ದಿಗಳೂ ಸಿಗುತ್ತವೆ. ನಿಮ್ಮ ನೆಚ್ಚಿನ ಪ್ರಕಾಶನಗಳನ್ನೂ ಸೇರಿಸಬಹುದು. ಆದರೆ ಸುದ್ದಿಯನ್ನು ಮ್ಯೂಟ್ ಅಥವಾ ಬ್ಲಾಕ್ ಮಾಡಲು, ತೆಗೆದು ಹಾಕಲು ಸಾಧ್ಯವಿಲ್ಲ. ಲೇಖನ ಯಾವಾಗ ಪ್ರಕಟವಾಗಿದೆ ಎಂಬುದರ ವಿವರಗಳನ್ನೂ ಪಡೆಯಬಹುದು. ಪುಸ್ತಕಗಳು, ನಿಯತಕಾಲಿಕೆಗಳು ಲೈಬ್ರರಿಯಲ್ಲಿ ಸಂಗ್ರಹವಾಗುತ್ತವೆ. ನಿಮಗೆ ಬೇಕಾದಾಗ ಖರೀದಿ ಮಾಡಬಹುದು.



## ಆಟಿಸಂ ಮಕ್ಕಳಿಗಾಗಿ ಆ್ಯಪ್

ಆಟಿಸಂ ಸಮಸ್ಯೆ ಇರುವ ಮಕ್ಕಳಿಗೆ ಹೊಸ ಸಾಮಾಜಿಕ ಹಾಗೂ ಸಂವಹನ ಕೌಶಲ್ಯವನ್ನು ಕಲಿಯಲು ಗೂಗ್ಲ್ ಗ್ಲಾಸ್ ಆ್ಯಪ್ ರೂಪಿಸಿದೆ. ಇದರಲ್ಲಿ ಆಕ್ಸೆಲೆರೊಮೀಟರ್ ಚಿಪ್ ಇದ್ದು ತಲೆಯ ಚಲನೆಯನ್ನು ಬೆಂಬಲಿಸುತ್ತದೆ. ಮಕ್ಕಳು ತಮ್ಮ ಪೋಷಕರನ್ನು ನೋಡುತ್ತಿದ್ದಾಗ ಅಥವಾ ಬೇರೆ ಕಡೆ ಗಮನ ಹರಿಸಿದಾಗ ಇದು ಉಪಯೋಗಕ್ಕೆ ಬರುತ್ತದೆ ಎನ್ನುತ್ತದೆ ಇದನ್ನು ರೂಪಿಸಿದ ಬ್ರೇನ್ ಪವರ್ ಕಂಪೆನಿ. ಇದರ ಮೂಲಕ ಮಕ್ಕಳ ನಡವಳಿಕೆಯನ್ನು ಅಧ್ಯಯನ ಮಾಡಬಹುದು. ಈ ಆ್ಯಪ್ ಮಕ್ಕಳು ತಮ್ಮ ಪೋಷಕರ ಜೊತೆ ಹೆಚ್ಚು ಹೆಚ್ಚು ಬೆರೆಯಲು, ದೃಷ್ಟಿ ಬೆರೆಸಿ ಸಂವಹನ ಮಾಡಲು ನೆರವಾಗುತ್ತದೆ.

## ಲೈಟ್‌ಹೆಡ್



ವಿದ್ಯಾರ್ಥಿಗಳಿಗೆ ನೆರವಾಗುವ ಆ್ಯಪ್. ಇತ್ತೀಚೆಗೆ ಅಧ್ಯಯನದ ಪುಸ್ತಕಗಳನ್ನು ಯಾರೂ ಖರೀದಿ ಮಾಡಲು ಇಷ್ಟಪಡುವುದಿಲ್ಲ. ಹಾಗೆಯೇ ಪ್ರಿಂಟೌಟ್‌ಗಳನ್ನು ತೆಗೆದುಕೊಳ್ಳುವುದೂ ಕಡಿಮೆಯೇ. ಕಂಪ್ಯೂಟರ್‌ನಲ್ಲೇ ನೇರವಾಗಿ ಓದಲು ಇಷ್ಟಪಡುವವರಿಗೆ ಒಂದು ತಾಪತ್ರಯವಿದೆ. ಕೀ ಅಥವಾ ಮೌಸ್ ಅನ್ನು ದೀರ್ಘಕಾಲ ಸ್ಪರ್ಶಿಸದಿದ್ದರೆ ಲ್ಯಾಪ್‌ಟಾಪ್ ಸ್ಲೀಪ್ ಮೋಡ್‌ಗೆ ಹೋಗುತ್ತದೆ. ಈ ಆ್ಯಪ್‌ನಿಂದ ಸ್ಲೀಪ್ ಮೋಡ್‌ಗೆ ಹೋಗದೆ ನೀವು ಆರಾಮವಾಗಿ ಓದಬಹುದು. ಇದು ಮ್ಯಾಕ್ ಬಳಕೆದಾರರಿಗೆ ಮಾತ್ರ.

## ವಲ್ಲಾಬೈ ಕ್ರೆಡಿಟ್ ಕಾರ್ಡ್ ರಿವಾರ್ಡ್ಸ್

ಇದು ಆ್ಯಂಡ್ರಾಯ್ಡ್‌ನ ಉಚಿತ ಆ್ಯಪ್. ನಿಮ್ಮ ಯಾವ ಯಾವ ಕ್ರೆಡಿಟ್ ಕಾರ್ಡ್‌ಗಳನ್ನು ಎಲ್ಲೆಲ್ಲಿ ಬಳಸಿದರೆ ನಗದು ವಾಪಸಾತಿ ಅಥವಾ ರಿವಾರ್ಡ್ ಪಾಯಿಂಟ್‌ಗಳು ಲಭಿಸುತ್ತವೆ ಎಂಬುದನ್ನು ತಿಳಿಸುತ್ತದೆ. ನಿಮ್ಮ ಹಣಕಾಸು ಪರಿಸ್ಥಿತಿಯ ನಿರ್ವಹಣೆಗೆ ಇದು ನೆರವು ನೀಡುತ್ತದೆ. ಕ್ರೆಡಿಟ್ ಕಾರ್ಡ್‌ನ ಬಿಲ್ ಬಾಕಿ ಇದ್ದರೆ ಎರಡು ದಿನ ಮೊದಲೇ ಎಚ್ಚರಿಕೆ ನೀಡುತ್ತದೆ. ಮನೆಯ ಹೊರಗಡೆ ಕಾಫಿ ಅಥವಾ ಊಟ ಮಾಡುತ್ತಿದ್ದರೆ ಅದರ ಬಜೆಟ್ ತಯಾರಿಸಲು ಸಹಾಯ ಮಾಡುತ್ತದೆ. ನಿಮ್ಮ ಕಾರ್ಡ್ ವಿವರ ನೀಡುವ ಮುನ್ನ ಅದರ ಪ್ರಯೋಜನಗಳನ್ನು ಚೆನ್ನಾಗಿ ಅರಿತುಕೊಳ್ಳುವುದು ಸೂಕ್ತ.

■ ಎಸ್. ತುಂಬೆ